**1216 (1514) ಶ್ರೀ ಸಿದ್ದು ಸಾವದಿ (ಜಮಖಂಡಿ)** : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೇಕಾರರಿಗೆ ಡಿ.ಸಿ.ಸಿ. ಬ್ಯಾಂಕುಗಳಿಗೆ ಸಾಲ ಕೊಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆಯೇ? ಹಾಗಿದ್ದಲ್ಲಿ, ಈಗಾಗಲೇ ಸಾಲ ಪಡೆದವರೆಷ್ಟು?

ಆ) ಬಾಗಲಕೋಟೆ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ 6 ತಿಂಗಳುಗಳಿಂದ ನೇಕಾರರು ಅರ್ಜಿ ಹಾಕಿ ಕಾಯ್ದರೂ ಸಾಲ ನೀಡದಿರಲು ಕಾರಣಗಳೇನು?

ಇ) ರೈತರಂತೆ ನೇಕಾರರಿಗೂ 4% ಬಡ್ಡಿ ದರದಲ್ಲಿ ಸಾಲ ಒದಗಿಸಲು ಸರ್ಕಾರದ ಕ್ರಮವೇನು?

ಈ) ಬಡ ನೇಕಾರರಿಗೆ 4% ಬಡ್ಡಿ ದರದಲ್ಲಿ ಸಾಲ ನೀಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೆ?

**ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು)** :

ಅ) ನೇಕಾರರಿಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ಸಾಲ ಕೊಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಈಗಾಗಲೇ ರೂ.370.87 ಲಕ್ಷಗಳಷ್ಟು ಸಾಲವನ್ನು ನೇಕಾರರಿಗೆ ವಿತರಿಸಲಾಗಿರುತ್ತದೆ.

ಆ) ಬಾಗಲಕೋಟೆ ಡಿ.ಸಿ.ಸಿ. ಬ್ಯಾಂಕಿಗೆ ಸಾಲ ಕೋರಿ ಬಂದಿರುವ ಅರ್ಜಿಗಳಲ್ಲಿ ಕ್ರಮಬದ್ಧವಾದ ಅರ್ಜಿಗಳಿಗೆ ಸಾಲ ಮಂಜೂರು ಮಾಡಲಾಗಿದೆ. ನೇಕಾರ ಸಹಕಾರ ಸಂಘಗಳ ಮುಖಾಂತರ ಎಲ್ಲಾ ನೇಕಾರರ ಸದಸ್ಯರಿಗೆ ಸಾಲ ಭದ್ರತೆಗೆ ಅನುಗುಣವಾಗಿ ಹಾಗೂ ಬ್ಯಾಂಕಿನ ಸಾಲ ನಿಯಮಾವಳಿಗೊಳಪಟ್ಟು ಹಾಗೂ ಲಭ್ಯವಿರುವ ಸಂಪನ್ಮೂಲದ ಆಧಾರದ ಮೇಲೆ ಸಾಲವನ್ನು ಮಂಜೂರು ಮಾಡಲಾಗುತ್ತಿದೆ.

ಇ) ಮತ್ತು ಈ) ರೈತರಂತೆ ನೇಕಾರರಿಗೂ ಶೇಕಡ 4ರ ಬಡ್ಡಿ ದರದಲ್ಲಿ ಸಹಕಾರಿ ಸಂಸ್ಥೆಗಳು ಸಾಲ ಒದಗಿಸಬೇಕೆಂದು ಸರ್ಕಾರವು ಆದೇಶಿಸಿರುತ್ತದೆ.

**1217 (1515) ಶ್ರೀ ಸಿದ್ದು ಸಾವದಿ (ಜಮಖಂಡಿ)** : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಶಸ್ವಿನಿ ಯೋಜನೆಯಲ್ಲಿ ಪ್ರೀಮಿಯಂ ಹಣ ಕಟ್ಟಿದವರೆಷ್ಟು?

ಆ) ಅವರುಗಳಲ್ಲಿ ಚಿಕಿತ್ಸೆ ಪಡೆದವರೆಷ್ಟು?

ಇ) ಯಶಸ್ವಿನಿ ಯೋಜನೆಯಲ್ಲಿ ರೋಗಿಗಳಿಗೆ ಬೇಳೆಗೆ ಸರಿಯಾಗಿ ಚಿಕಿತ್ಸೆ ನೀಡದೇ, ಅವರಿಂದಲೂ ಅರ್ಧ ಹಣ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ಯೋಜನೆಯ ಸದಸ್ಯ ರೋಗಿಗಳಿಗೆ ಸಂಪೂರ್ಣವಾಗಿ ಉಚಿತ ಚಿಕಿತ್ಸೆ ನೀಡದಿರಲು ಕಾರಣವೇನು;

ಉ) ಹಾಗಿದ್ದಲ್ಲಿ, ಪೂರ್ಣ ಚಿಕಿತ್ಸೆ ನೀಡುವಲ್ಲಿ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

**ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು) :**

ಅ) 2006–07ನೇ ಸಾಲಿನಲ್ಲಿ 18.54 ಲಕ್ಷ ಯಶಸ್ವಿನಿ ಫಲಾನುಭವಿಗಳು ಯಶಸ್ವಿನಿ ವಂತಿಗೆ ಪಾವತಿ ಮಾಡಿರುತ್ತಾರೆ.

ಆ) ಅವರ ಪೈಕಿ 39441 ಫಲಾನುಭವಿಗಳು ಶಸ್ತ್ರ ಚಿಕಿತ್ಸಾ ಸೌಲಭ್ಯವನ್ನು ಮತ್ತು 206777 ಫಲಾನುಭವಿಗಳು ಉಚಿತ ಹೊರರೋಗ ಚಿಕಿತ್ಸೆಯ ಸೌಲಭ್ಯವನ್ನು ಪಡೆದಿರುತ್ತಾರೆ.

ಇ) ಯಶಸ್ವಿನಿ ಫಲಾನುಭವಿಗಳಿಗೆ ವೇಳೆಗೆ ಸರಿಯಾಗಿ ಚಿಕಿತ್ಸೆ ನೀಡುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೆ ಕೆಲವು ನೆಟ್‌ವರ್ಕ್ ಆಸ್ಪತ್ರೆಗಳು ಯಶಸ್ವಿನಿ ಟ್ರಸ್ಟು ಶಸ್ತ್ರಚಿಕಿತ್ಸೆಗೆ ನಿಗದಿಗೊಳಿಸಿದ ದರಕ್ಕಿಂತ ಹೆಚ್ಚಿಗೆ ಹಣವನ್ನು ಯಶಸ್ವಿನಿ ಫಲಾನುಭವಿಗಳಿಗೆ ಸಂಗ್ರಹಿಸುತ್ತಿವೆ ಮತ್ತು ಮುಂಗಡ ಹಣ ಪಡೆಯುತ್ತಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದ್ದು ಅಂಥ ಆಸ್ಪತ್ರೆಗಳನ್ನು ಯಶಸ್ವಿನಿ ಗುರುತಿಸಿದ ಆಸ್ಪತ್ರೆಗಳ ಪಟ್ಟಿಯಿಂದ ಸ್ಥಗಿತಗೊಳಿಸಲಾಗಿದೆ.

ಯಶಸ್ವಿನಿ ಯೋಜನೆಯು ಶಸ್ತ್ರಚಿಕಿತ್ಸೆಗೆ ಅನ್ವಯವಾಗುವ ಯೋಜನೆಯಾಗಿದ್ದು ಶಸ್ತ್ರಚಿಕಿತ್ಸೆಗೆ ಮೊದಲು ಮತ್ತು ಯಶಸ್ವಿನಿ ಫಲಾನುಭವಿಯು ಆಸ್ಪತ್ರೆಯಿಂದ ಬಿಡುಗಡೆ ಆದನಂತರ ತಗಲುವ ಔಷಧಿ, ಇಂಜೆಕ್ಷನ್ ಇತ್ಯಾದಿಗಳ ಬಗ್ಗೆ ಆಗುವ ವೆಚ್ಚವನ್ನು ಯಶಸ್ವಿನಿ ಟ್ರಸ್ಟು ಭರಿಸುವುದಿಲ್ಲ. ಆರೋಗ್ಯ ತಪಾಸನೆಯ ವೆಚ್ಚವನ್ನು ಮತ್ತು ಆ್ಯಂಜಿಯೋಪ್ಲಾಸ್ಟಿ ಪ್ರೋಸೀಜರ್‌ನಲ್ಲಿ ಸ್ಟೆಂಟ್ ವೆಚ್ಚ ಮತ್ತು ತೆರೆದ ಶಸ್ತ್ರಚಿಕಿತ್ಸೆಯಲ್ಲಿ ವಾಲ್ವ ವೆಚ್ಚವನ್ನು ಯಶಸ್ವಿನಿ ಟ್ರಸ್ಟು ಭರಿಸುವುದಿಲ್ಲ.

ಈ) ಯಶಸ್ವಿನಿ ಯೋಜನೆಯು ಸ್ವಂತ ಬಂಡವಾಳ ಯೋಜನೆಯಾಗಿದ್ದು ಯಶಸ್ವಿನಿ ಫಲಾನುಭವಿಗಳಿಂದ ಸಂಗ್ರಹಿಸಿದ ಅಲ್ಪ ಮೊತ್ತ ರೂ.120/- ಇದು ಯೋಜನೆಯ ವೆಚ್ಚವನ್ನು ಸರಿದೂಗಿಸಲು ಸಾಲುತ್ತಿಲ್ಲ. ಆದ್ದರಿಂದ, ಔಷಧಿ, ಇಂಜೆಕ್ಷನ್, ಸ್ಟೆಂಟ್‌ವಾಲ್ವ್ ಇವುಗಳ ವೆಚ್ಚವನ್ನು ಯಶಸ್ವಿನಿ ಟ್ರಸ್ಟು ಭರಿಸುವುದು ಸಾಧ್ಯವಾಗುವುದಿಲ್ಲ. ಸದರಿ ಉದ್ದೇಶಗಳಿಗಾಗಿ ಆದ ವೆಚ್ಚವನ್ನು ಯಶಸ್ವಿನಿ ಫಲಾನುಭವಿಯಿಂದ ನೆಟ್‌ವರ್ಕ್ ಆಸ್ಪತ್ರೆ ಸಂಗ್ರಹಿಸಬಹುದು.

ಉ) ಸದ್ಯಕ್ಕೆ ಯಶಸ್ವಿನಿ ಫಲಾನುಭವಿಗಳು ಎಲ್ಲ ವೆಚ್ಚವನ್ನು ಯಶಸ್ವಿನಿ ಟ್ರಸ್ಟು ಭರಿಸಿಸುವುದು ಸಾಧ್ಯವಿಲ್ಲ.

**1218 (1565) ಶ್ರೀ ಸಿದ್ದು ಸಾವದಿ (ಜಮಖಂಡಿ) :** ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005-06ರ ತನಕ ರೈತರಿಗೆ ರಾಜ್ಯದ ಕೃಷಿ ಪತ್ತಿನ ಸಂಘಗಳು ಸಾಲ ಮತ್ತು ಬಡ್ಡಿ ಮನ್ನಾ ಮಾಡಿರುವ ರೀತಿಗಳು ಯಾವುವು?

ಆ) ಇದರಿಂದ ಎಲ್ಲ ರೀತಿ ಸಾಲ ಪಡೆದ ರೈತರಿಗೆ ಅಸಲು ಮತ್ತು ಬಡ್ಡಿ ಮನ್ನಾ ಸೌಲಭ್ಯ ದೊರೆತಿದೆಯೇ?

ಇ) ಹಾಗಿದ್ದಲ್ಲಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ಪಡೆದ ಚಾಲ್ತಿ ಸಾಲಗಾರರಿಗೆ ಬಡ್ಡಿ ಮನ್ನಾ ಸೌಲಭ್ಯ ದೊರೆತಿಲ್ಲದಿರುವುದು ನಿಜವೇ?

ಈ) ಹಾಗಿದ್ದಲ್ಲಿ, ಪ್ರತಿ ವರ್ಷ ಅವಧಿ ಒಳಗಾಗಿ ಅಸಲು ಮತ್ತು ಬಡ್ಡಿ ತುಂಬುವ ರೈತರಿಗೆ ಅನ್ಯಾಯವಾಗುವುದಿಲ್ಲವೇ?

ಉ) ಇದಕ್ಕೆ ಸರ್ಕಾರದ ಆದೇಶವೇನು?

**ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು) :**

ಅ) 2005-06ರ ತನಕ ರಾಜ್ಯದ ರೈತರಿಗೆ ರಾಜ್ಯ ಸರ್ಕಾರ ಬಡ್ಡಿ ಮನ್ನಾ ಮಾಡಿರುವ ವಿವರಗಳು ಕೆಳಕಂಡಂತಿರುತ್ತವೆ.

1) 2002ರ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ರೈತರಿಗೆ ನೀಡಲಾದ ಬೆಳೆ ಸಾಲಗಳ ಮೇಲಿನ ಬಡ್ಡಿ ಮನ್ನಾ
2) ಪಿಕಾರ್ಡ್ ಬ್ಯಾಂಕುಗಳು ನೀಡಿರುವ ದೀರ್ಘಾವಧಿ ಸಾಲಗಳ ಬಾಬ್ತು ಶೇ.9ಕ್ಕಿಂತ ಹೆಚ್ಚಿನ ಬಡ್ಡಿಯನ್ನು ಮನ್ನಾ ಮಾಡಿರುವುದು